ಭೂ ನ್ಯಾಯ ಮಂಡಳಿ

599 (1206) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನಲ್ಲಿ (Land Tribunal) ಭೂ ನ್ಯಾಯ ಮಂಡಳಿ ರಚನೆಯಾಗಿರುವುದೇ?

ಆ) ಹಾಗಿದ್ದಲ್ಲಿ, ಈ ಭೂ ನ್ಯಾಯ ಮಂಡಳಿ ಎಷ್ಟು ಸಲ ಸಭೆ ಸೇರಿ ಎಷ್ಟು ಪ್ರಕರಣಗಳಲ್ಲಿ ತೀರ್ಮಾನವನ್ನು ನೀಡಲಾಗಿರುತ್ತದೆ.

ಇ) ಈ ಭೂ ನ್ಯಾಯ ಮಂಡಳಿ ನಡೆಸದಿದ್ದಲ್ಲಿ ಅದಕ್ಕೆ ಕಾರಣಗಳೇನು? ಮತ್ತು ಭೂ ನ್ಯಾಯ ಮಂಡಳಿ ಸಭೆಯನ್ನು ಎಂದು ಕರೆಯಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ದಿನಾಂಕ: 01–10–2008 ರಂದು ರಚನೆಯಾಗಿದೆ.

ಆ) ಸಭೆ ನಡೆದಿರುವುದಿಲ್ಲ.

ಇ) ಭೂ ನ್ಯಾಯ ಮಂಡಳಿ ದಿನಾಂಕ: 19–3–2010 ರಂದು ಸಭೆ ಕರೆಯಲಾಗಿದೆ.

ಸಣ್ಣ ಕೈಗಾರಿಕೆಗಳು

600 (1207) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಕ್ಷೇತ್ರದಲ್ಲಿ ಯಾವ ಯಾವ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿರುವುದು?

ಆ) ಮುಂದಿದ್ದಲ್ಲಿ, ಯಾವ ಯಾವ ಸಣ್ಣ ಕೈಗಾರಿಕಾ ಘಟಕ ಸ್ಥಾಪಿಸಬಹುದಾಗಿದೆ?

ಇ) ಹೊಸ ಹೊಸ ಉದ್ದಿಮೆದಾರರನ್ನು ವಿಜಾಪುರದಲ್ಲಿ ಕೈಗಾರಿಕಾ ಬಂಡವಾಳ ಹೂಡಲು ಪ್ರೇರೇಪಿಸಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?